ಓ.ಎಸ್. ನಂಬರ:-119 /2024

ಪಿ.ಡಬ್ಲೂ-:-1 : ಶಿವಯ್ಯ ತಂದೆ ಬಸ್ಸಯ್ಯ ಮಠಪತಿ

ದಿನಾಂಕ:- 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಪಾಟೀ ಸವಾಲು : ಶ್ರೀ. ಎಸ್ ಜಿ ಹೆಚ್ ವಕೀಲರಿಂದ :-*

ಈ ದಾವೆಯಲ್ಲಿ ೬ ಜನರು ಇರುತ್ತೇವೆ. ನಮ್ಮ ತಂದೆ ಬಸ್ಸಯ್ಯರವರಿಗೆ ಒಟ್ಟು ೬ ಜನ ಮಕ್ಕಳು ಇರುತ್ತೇವೆ. ನಾವು ೬ ಜನ ಸುಮಾರು ೧೦-೧೨ ವರ್ಷಗಳ ಹಿಂದೆ ಬೇರೆಯಾಗಿರುತ್ತೇವೆ. ನನಗೆ ಸರ್ವೆ ನಂಬರ ೨೬ ರ ಜಮೀನು ಬಂದಿತ್ತು. ೫ನೇ ಪ್ರತಿವಾದಿಯ ಗಂಡ ಶರಣಯ್ಯರವರಿಗೂ ಸರ್ವೆ ನಂಬರ ೨೬ ರಲ್ಲಿ ಜಮೀನು ಬಂದಿತ್ತು. ೧ನೇ ಪ್ರತಿವಾದಿಯ ಹೆಸರಿನಲ್ಲಿ ನಾವು ಎಲ್ಲರೂ ಕೂಡಿ ಇದ್ದಾಗ ೪ ಎಕರೆ ೨೪ ಗುಂಟೆ ಜಮೀನು ಖರೀದಿಸಿರುತ್ತೇವೆ. ಸದರಿ ಜಮೀನಿನ ಸರ್ವೆ ನಂಬರ ೧೦೨ ಆಗಿರುತ್ತದೆ. ಸರ್ವೆ ನಂಬರ ೧೦೨ ರ ಜಮೀನು ಮಾತ್ರ ೧ನೇ ಪ್ರತಿವಾದಿ ಹಿಸ್ಸೆಗೆ ಇರುತ್ತದೆ ಅವರಿಗೆ ಬೇರೆ ಜಮೀನಿನಲ್ಲಿ ಇನ್ನೂ ಹಿಸ್ಸೆ ಬಂದಿರುವುದಿಲ್ಲ. ೪ನೇ ಪ್ರತಿವಾದಿ ಮಡಿವಾಳಯ್ಯರವರಿಗೆ ಸರ್ವೆ ನಂಬರ ೧೪೧ ರಲ್ಲಿ ೩ ಎಕರೆ ೪ ಗುಂಟೆ

ಜಮೀನು ಹಿಸ್ಸೆಗೆ ಬಂದಿತ್ತು. ೩ನೇ ಪ್ರತಿವಾದಿ ಮಹಾಂತಯ್ಯರವರಿಗೆ ಸರ್ವೆ ನಂಬರ ೧೪೧ ರಲ್ಲಿ ೪ ಎಕರೆ ಹಿಸ್ಸೆಗೆ ಬಂದಿರುತ್ತದೆ.

೨. ೫ನೇ ಪ್ರತಿವಾದಿ ಗಂಡ ಶರಣಯ್ಯರವರಿಗೂ ಕೂಡಾ ಸರ್ವೆ ನಂಬರ ೨೬ ರ ಜಮೀನಿನಲ್ಲಿ ೩ ಎಕರೆ ಹಿಸ್ಸೆಗೆ ಬಂದಿರುತ್ತದೆ. ನನ್ನ ಮತ್ತು ಪ್ರತಿವಾದಿಗಳ ಹಿಸ್ಸೆಗೆ ಬಂದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿರುತ್ತೇನೆ. ನನ್ನ ಹಿಸ್ಸೆಗೆ ಬಂದ ಸರ್ವೆ ನಂಬರ ೨೬ ರ ಜಮೀನನ್ನು ನಾನು ಲಾಲು ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ. ನಾನು ಸುಭಾಷ ತಂದೆ ಲಾಲಪ್ಪ ಕಣ್ಣೆರವರಿಗೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕ 20-05-2024 ರಂದು ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

೩. ನಾವೆಲ್ಲ ಬೇರೆಯಾದ ನಂತರ ೧ನೇ ಪ್ರತಿವಾದಿ ಸರ್ವೆ ನಂಬರ ೧೦೨ ರ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಆಗುವಾಗ ನನ್ನ ಎಲ್ಲಾ ಅಣ್ಣತಮ್ಮಂದಿರು ಇದ್ದರು. ಖರೀದಿ ಪತ್ರದಲ್ಲಿ ಮಳೆಪ್ಪ ಎಂಬ ಸಾಕ್ಷಿದಾರರು ಇದ್ದರು, ಉಳಿದವರು ಈಗ ಮೃತರಾಗಿರುತ್ತಾರೆ. ನಾವು ಈಗ ೧೦-೧೨ ವರ್ಷಗಳ ಹಿಂದೆ ಬೇರೆಯಾಗಿರುತ್ತೇವೆ ಎಂದು ದಾವೆಯಲ್ಲಿ ತಿಳಿಸಿರುವುದಿಲ್ಲ.

೪.    ನಾನು ಈ ದಾವೆಯಲ್ಲಿ ೧ನೇ ಪ್ರತಿವಾದಿಯ ಪಾಲಿಗೆ ಬಂದ ಜಮೀನು ಮತ್ತು ಅವರು ಖರೀದಿಸಿದ ಜಮೀನು ಮಾತ್ರ ತೋರಿಸಿರುತ್ತೇನೆ, ಉಳಿದ ನನ್ನ ಹಾಗೂ ನನ್ನ ಸಹೋದರರ ಪಾಲಿಗೆ ಬಂದ ಜಮೀನುಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿಯನ್ನು ಬಿಟ್ಟು ಉಳಿದ ಪ್ರತಿವಾದಿಗಳು ಯಾವುದೆ ತಕರಾರು ಈ ದಾವೆಯಲ್ಲಿ ಹಾಕಿರುವುದಿಲ್ಲ.

೫.    ನನ್ನ ದೊಡ್ಡಪ್ಪ ವೀರಭದ್ರಯ್ಯ ತಂದೆ ಶರಣಯ್ಯ ಮಠಪತಿರವರ ಹೆಸರಿನಲ್ಲಿ ಸರ್ವೆ ನಂಬರ ೧೪೧/೨ ರಲ್ಲಿ ೧೨ ಎಕರೆ ೩೨ ಗುಂಟೆ ಜಮೀನು ಇತ್ತು ಎಂದರೆ ಸರಿ. ನಮ್ಮ ತಂದೆ ಬಸ್ಸಯ್ಯರವರು ಸದರಿ ವೀರಭದ್ರಯ್ಯರವರ ತಮ್ಮನಾಗಿರುತ್ತಾನೆ ಎಂದರೆ ಸರಿ. ಸರ್ವೆ ನಂಬರ ೧೪೧/೨ ರಲ್ಲಿ ನಮ್ಮ ತಂದೆ ಬಸ್ಸಯ್ಯರವರ ಪಾಲಿಗೆ ೩ ಎಕರೆ ೪ ಗುಂಟೆ ಜಮೀನು ಬಂದಿದೆ ಎಂದರೆ ಸರಿ. ದಾನಯ್ಯ ತಂದೆ ಶರಣಯ್ಯರವರು ನಮ್ಮ ಕಾಕಾ ಆಗಿರುತ್ತಾರೆ. ಸದರಿ ದಾನಯ್ಯರವರಿಗೆ ಸರ್ವೆ ನಂಬರ ೧೪೧/೨ ರಲ್ಲಿ ೩ ಎಕರೆ ೪ ಗುಂಟೆ ಜಮೀನು ಪಾಲಿಗೆ ಹೋಗಿತ್ತು ಎಂದರೆ ಸರಿ. ನನ್ನ ಕಾಕಾ ಸಿದ್ದಯ್ಯರವರಿಗೆ ಕೂಡಾ ಸದರಿ ಸರ್ವೆ ನಂಬರನಲ್ಲಿ ೪ ಎಕರೆ ೧೩ ಗುಂಟೆ ಜಮೀನು ಪಾಲಿಗೆ ಹೋಗಿರುತ್ತದೆ ಎಂದರೆ ಸರಿ.

೬. ಸರ್ವೆ ನಂಬರ ೧೪೧/೨ ರಲ್ಲಿ ನಮ್ಮ ತಂದೆ ಬಸ್ಸಯ್ಯರವರ ನಂತರ ೪ ಎಕರೆ ೧೦ ಗುಂಟೆ ಜಮೀನು ನನ್ನ ತಮ್ಮನಾದ ಮಹಾಂತಯ್ಯರವರಿಗೆ ೪ ಎಕರೆ ಜಮೀನು ಹೋಗಿದೆ ಎಂದರೆ ಸರಿ. ದಾನಯ್ಯಸ್ವಾಮಿರವರ ಮಗನಾದ ಈರಯ್ಯರವರಿಗೆ ೩ ಎಕರೆ ೧ ಗುಂಟೆ ಜಮೀನು ಸದರಿ ಸರ್ವೆ ನಂಬರನಲ್ಲಿ ಹೋಗಿದೆ ಎಂದರೆ ಸರಿ. ಸರ್ವೆ ನಂಬರ ೧೪೧/೨ ರ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಕಾಕಾಗಳು ಮತ್ತು ನಮ್ಮ ತಂದೆ ಬೇರೆಯಾಗಿದ್ದು, ನಮ್ಮ ತಂದೆಯ ಪಾಲಿನ ಜಮೀನು ಮಾತ್ರ ನಮಗೆ ಸಂಬಂಧ ಇರುತ್ತದೆ ಎನ್ನುತ್ತಾರೆ. ಸದರಿ ಸರ್ವೆ ನಂಬರ ೧೪೧/೨ ರಲ್ಲಿ ನನ್ನ ತಮ್ಮನಾದ ಮಡಿವಾಳಯ್ಯರವರ ಹೆಸರಿನಲ್ಲಿ ೩ ಎಕರೆ ೧ ಗುಂಟೆ ಜಮೀನು ಇರುತ್ತದೆ ಎಂದರೆ ಸರಿ.

೭. ನನ್ನ ಮತ್ತು ನನ್ನ ಅಣ್ಣ-ತಮ್ಮಂದಿರ ನಡುವೆ ಜಮೀನಿನ ಫಲವತ್ತತೆಯ ಆಧಾರದ ಮೇಲೆ ಹೆಚ್ಚು-ಕಡಿಮೆ ವಿಸ್ತೀರ್ಣದ ಜಮೀನು ನಮ್ಮ ಪಾಲಿಗೆ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ೩ನೇ ಪ್ರತಿವಾದಿ ಮಹಾಂತಯ್ಯರವರ ಹೆಸರಿನಲ್ಲಿರುವ ೪ ಎಕರೆ ೧೦ ಗುಂಟೆ ಜಮೀನಿನಲ್ಲಿ ನನ್ನ ಪಾಲು ಇರುವುದಿಲ್ಲ. ಸಾಕ್ಷಿಯು ಅದು ನಮ್ಮ ತಂದೆಯ ಜಮೀನು ಅಲ್ಲ ಎನ್ನುತ್ತಾರೆ. ನಮ್ಮ ಕಾಕಾ ಸಿದ್ದಯ್ಯರವರು ಬೇಕಾಗಿ ೪ ಎಕರೆ ೧೦ ಗುಂಟೆ ಜಮೀನನ್ನು ನನ್ನ

ತಮ್ಮನಾದ ಮಹಾಂತಯ್ಯರವರ ಹೆಸರಿನಲ್ಲಿ ಮಾಡಿರುತ್ತಾರೆ. ನನ್ನ ತಮ್ಮ ಮಹಾಂತಯ್ಯರವರನ್ನು ಈ ದಾವೆಯಲ್ಲಿ ನನ್ನ ತಂದೆಯ ಆಸ್ತಿಯಲ್ಲಿ ಅವರಿಗೂ ಪಾಲು ಹೋಗಬೇಕು ಎಂದು ನಾನು ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ.

೮. ನಮ್ಮ ತಂದೆಯ ಹೆಸರಿನಲ್ಲಿ ೩ ಎಕರೆ ಜಮೀನು ಇತ್ತು ಮತ್ತು ನಮ್ಮ ತಂದೆ ಖರೀದಿ ಮಾಡಿದ ೪ ಎಕರೆ ೨೪ ಗುಂಟೆ ಜಮೀನು ಇರುತ್ತದೆ. ನಾವು ೩೫ ವರ್ಷಗಳ ಹಿಂದೆ ಬೇರೆಯಾಗಿರುತ್ತೇವೆ ಎಂದರೆ ಸಾಕ್ಷಿಯು ನಾನು ಊರು ಬಿಟ್ಟು ದುಡಿಯಲು ಹೋಗಿರುತ್ತೇನೆ ಎನ್ನುತ್ತಾರೆ. ನಾವು ಬೇರೆ-ಬೇರೆಯಾಗಿ ಇದ್ದಾಗ ನಮ್ಮ ಆದಾಯವನ್ನು ನಾವು-ನಾವೆ ಬಳಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಜಮೀನನ್ನು ನಾವು ಕೂಡಿ ಇದ್ದಾಗಲೆ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ನಾವು ೩ ಎಕರೆ ಜಮೀನಿನ ಆದಾಯದ ಮೇಲೆ ಮತ್ತು ನಮ್ಮ ತಂದೆ ಹಿಟ್ಟು ಮಾರುತ್ತಿದ್ದರು ಮತ್ತು ನಾವು ಕೂಡಾ ದುಡಿಯುತ್ತಿದ್ದೇವು ಅದರಿಂದ ೪ ಎಕರೆ ಜಮೀನು ಖರೀದಿಸಿರುತ್ತೇವೆ. ದಾವಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ ಎಂದು ದಾವೆಯಲ್ಲಿ ಬರೆಸಿರುತ್ತೇವೆ ಎಂದರೆ ಸರಿ. ಸಾಕ್ಷಿಯು ೧ ಖರೀದಿ ಮಾಡಿರುತ್ತೇವೆ ಮತ್ತು ೧ ಹಿರಿಯರಿಂದ ಬಂದಿರುತ್ತದೆ ಎನ್ನುತ್ತಾರೆ.

೯. ನಮ್ಮ ತಂದೆ ಇದ್ದಾಗ ಕೂಡಿ ಜಮೀನು ಖರೀದಿ ಮಾಡಿರುತ್ತೇವೆ ಎಂದು ನಾನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ೧೯೯೩ ರಲ್ಲಿ ಸರ್ವೆ ನಂಬರ ೧೦೨ ರ ಜಮೀನನ್ನು ಖರೀದಿ ಮಾಡಿರುತ್ತೇವೆ. ನಮ್ಮ ತಂದೆ ಮೃತರಾಗಿ ಸುಮಾರು ೨೦ ವರ್ಷ ಮೇಲೆ ಆಗಿರುತ್ತದೆ. ನಾನು ನನ್ನ ಪಾಲಿಗೆ ಬಂದ ಸರ್ವೆ ನಂಬರ ೨೬/೩ ರ ೩ ಎಕರೆ ಜಮೀನನ್ನು ಸುಭಾಷ ತಂದೆ ಲಾಲಪ್ಪ ಕಣ್ಣೆರವರಿಗೆ ಮಾರಾಟ ಮಾಡಿ ಈಗ ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ನನ್ನ ಕಾಕಾನಾದ ಸಿದ್ದಯ್ಯರವರ ಮಗಳಾದ ಗಂಗುಬಾಯಿ ದಾವೆ ಹಾಕಿದ್ದರಿಂದ ಸರ್ವೆ ನಂಬರ ೨೬ ರ ಜಮೀನನ್ನು ನಾನು ಬಿಟ್ಟುಕೊಟ್ಟಿರುತ್ತೇನೆ ಎನ್ನುತ್ತಾರೆ.

೧೦. ನನಗೆ ಈಗ ತೋರಿಸಿದ ಖರೀದಿ ಪತ್ರ ನಾನು ಸುಭಾಷ ತಂದೆ ಲಾಲಪ್ಪ ಕಣ್ಣೆರವರಿಗೆ ಬರೆದುಕೊಟ್ಟ ಖರೀದಿ ಪತ್ರ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿಕೊಂಡಿದ್ದರಿಂದ ಅದನ್ನು ಗುರುತಿಸುವ ಸಲುವಾಗಿ ನಿಡಿ-೧ ಎಂದು ಗುರುತಿಸಲಾಯಿತು. ೨೦೨೪ ರಲ್ಲಿ ನಾನು ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಈಗ ನನಗೆ ತೋರಿಸಿದ ಖರೀದಿ ಪತ್ರ ಅಲ್ಲಾವುದ್ದೀನರವರಿಂದ ೧ನೇಪ್ರತಿವಾದಿ ರೇವಯ್ಯ ಖರೀದಿ ಮಾಡಿದ

ಖರೀದಿ ಪತ್ರ ಇರುತ್ತದೆ ಎಂದರೆ ಸರಿ. ಸಾಕ್ಷಿಯು ನಾವು ಎಲ್ಲರೂ ಕೂಡಿ ಇದ್ದಾಗಲೆ ಸದರಿ ಜಮೀನನ್ನು ನಮ್ಮ ತಂದೆ ರೇವಯ್ಯರವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಗುರುತಿಸುವ ಸಲುವಾಗಿ ನಿಡಿ-೨ ಎಂದು ಗುರುತಿಸಲಾಯಿತು.

೧೧. ನಮ್ಮ ತಂದೆ ಇರುವಾಗಲೆ ಜಮೀನನ್ನು ೧ನೇ ಪ್ರತಿವಾದಿ ರೇವಯ್ಯರವರ ಹೆಸರಿನಲ್ಲಿ ನಮ್ಮ ತಂದೆ ಖರೀದಿಸಿರುತ್ತಾರೆ ಎಂದು ದಾವೆಯಲ್ಲಿ ತಿಳಿಸಿರುತ್ತೇನೆ. ನಾನು ಆ ರೀತಿ ಬರೆಸದೆ ಇದ್ದರೂ ಸಹ ಬರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ೧ನೇ ಪ್ರತಿವಾದಿ ಆಗ ಕೇವಲ ೨೫ ವರ್ಷ ವಯಸ್ಸು ಇತ್ತು ಅವನು ಒಬ್ಬನೆ ಹೇಗೆ ಜಮೀನು ಖರೀದಿ ಮಾಡುತ್ತಾನೆ ಎನ್ನುತ್ತಾರೆ. ನಮ್ಮ ತಂದೆಗೆ ಒಂದೆ ಮನೆ ಇರುತ್ತದೆ. ನಾನು ಜೆರಟಗಿಯಲ್ಲಿ ಬಾಡಿಗೆ ಇರುತ್ತೇನೆ. ೫ನೇ ಪ್ರತಿವಾದಿ ಅಫಜಲಪೂರದಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಾರೆ. ನಮ್ಮ ನಡುವೆ ಈಗಾಗಲೆ ಪಾಲು ಆಗಿದ್ದರೂ ಸಹ ನಾನು ಈಗ ೧ನೇ ಪ್ರತಿವಾದಿಯ ಪಾಲಿಗೆ ಬಂದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.